# ಅವಧೂತರು

ಅವಧೂತರು ಎಂದರೆ ಎಲ್ಲವನ್ನೂ ತೊರೆದವರು, ಎಲ್ಲವನ್ನೂ ತೊಳೆದುಕೊಂಡವರು. ಅರಿಷಡ್ವರ್ಗಗಳಿಂದ ಮುಕ್ತರಾದವರು. ಇದು ಭೇದಗಳ ಲೋಕ. ವರ್ಣ-ಜಾತಿ, ಉಚ್ಚ- ನೀಚ ಮೇಲು- ಕೀಳು, ನಾನು-ನೀನು ಇವೆಲ್ಲವೂ ಭೇದಗಳೆ. ಇವುಗಳನ್ನು ಯಾರು ಮೀರುತ್ತಾರೋ ಅವರೇ ಅವಧೂತರು. ಅನೇಕದ ಅನುಭವದಿಂದ ಪರಿತ್ಯಕ್ತವಾದ ಮನಸ್ಸು ಏಕದ ಅನುಭವಕ್ಕೆ ತೆರೆದುಕೊಳ್ಳುವ ಆಖೈರು ಸಂಕಲ್ಪವೇ ಅವಧೂತಕ್ಕೆ ಮೆಟ್ಟಿಲು.

ಪ್ರಕೃತಿಯನ್ನು ಎರಡು ಬಗೆಯಾಗಿ ನಮ್ಮ ತಾತ್ವಿಕರು ವಿಂಗಡಿಸಿದ್ದಾರೆ; ಒಂದು ಪರಾಪ್ರಕೃತಿ ಇನ್ನೊಂದು ಅಪರಾಪ್ರಕೃತಿ. ಪರಾಪ್ರಕೃತಿ ಎಂದರೆ ತನ್ನಷ್ಟಕ್ಕೆ ತಾನು ಪ್ರಕಟಗೊಳ್ಳುವ ಜೀವಯಾನ. ಅಲ್ಲಿ ವಿಕಾರಗಳು ಇರುವುದಿಲ್ಲ. ಬೈಗು-ಬೆಳಗನ್ನು ಸ್ವಚ್ಛಂದ ಆಸ್ವಾದಿಸುವ ನಿಶ್ಚಲ ಸ್ಥಿತಿ ಇರುತ್ತದೆ. ಅಪರಾಪ್ರಕೃತಿ ಎಂದರೆ ವಿಕಾರಗಳ ಲೋಕ. ಇವು ಪಂಚಭೂತಗಳ ಸ್ವರೂಪದಲ್ಲಿ ಪ್ರಕಟಗೊಳ್ಳುತ್ತವೆ. ಅವೇ ಮನುಷ್ಯನಲ್ಲಿ ಮನಸ್ಸು, ಬುದ್ಧಿ, ಅಹಂಕಾರಗಳಾಗಿ ಬೆಳೆಯುತ್ತವೆ. ವ್ಯಕ್ತಿಯಲ್ಲಿ ಭಾವಗಳು ಬೇರೆಯಾಗಿರುವುದರಿಂದ ಅನೇಕತೆ, ಪ್ರತ್ಯೇಕತೆಗಳು ಕಾಣಿಸಿಕೊಳ್ಳುತ್ತವೆ.

ಅವಧೂತರಿಗೆ ಧರ್ಮವೆಂಬುದಿಲ್ಲ. ವರ್ಣಾಶ್ರಮಗಳ ಹಂಗಂತೂ ಇಲ್ಲವೇ ಇಲ್ಲ. ಮಳೆಯಲ್ಲಿ ನೆನೆದ ಗಿಡಗಳಿಗೆ ನೀರುಣಿಸುವುದಿಲ್ಲ, ಅಂತೆಯೆ ಅವಧೂತರು ಧರ್ಮವನ್ನು ಆಚರಿಸಬೇಕಾಗಿಲ್ಲ. ನೀತಿ, ನಿಯಮ, ಶಿಷ್ಟಾಚಾರಗಳಿಗೆ ಬದ್ಧರಲ್ಲ. ಅವರು ಇರುವ ಜಾಗದಲ್ಲಿ ಧರ್ಮಮೇಘ ಇರುವುದರಿಂದ ಅವರಿಗೆ ಯಾವುದರ ಹಂಗೂ ಇಲ್ಲ. ಧರ್ಮಮೇಘವೆಂದರೆ ಅದೊಂದು ಸಮಾಧಿ ಸ್ಥಿತಿ. ಮನೋ- ಬುದ್ಧಿ- ಅಹಂಕಾರಗಳು ಕ್ರಮವಾಗಿ ಸತ್ವ, ರಜ, ತಮೋಗುಣೋಪೇತವಾಗಿರುತ್ತವೆಂಬುದು ಅನುಭವಸಿದ್ಧವಾದ ಮಾತು. ಧರ್ಮಮೇಘವನ್ನು ಸಹಜ ಅವಸ್ಥೆಯಾಗಿ ಉಳ್ಳವನಿಗೆ ಎಲ್ಲವನ್ನೂ ಸತ್ವಗುಣೋಪೇತವಾಗಿ ಪರಿವರ್ತಿಸುವ ಶಕ್ತಿಯಿರುತ್ತದೆ.

ವಿವಿಧ ಧರ್ಮಗಳು ಅನೇಕ ಲೋಕಗಳ ಬಗೆಗೆ ಹೇಳುತ್ತವೆ. ವಿಜ್ಞಾನವೂ ಅದನ್ನೆ ಹೇಳುತ್ತಿದೆ. ಬ್ರಹ್ಮಾಂಡವು ಒಂದೇ ಅಲ್ಲವೆಂಬುದನ್ನು, ಅಸಂಖ್ಯಾತವಾಗಿವೆಯೆಂಬುದನ್ನು ತತ್ವಶಾಸ್ತ್ರ ಹೇಳುತ್ತದೆ ಮತ್ತು ಖಗೋಳಶಾಸ್ತ್ರವೂ ಒಪ್ಪುತ್ತಿದೆ. ಭೂಲೋಕದ ಪ್ರಾಣಿಗಳಲ್ಲಿ ಪೃಥ್ವಿಯ ಅಂಶ ಹೆಚ್ಚಾಗಿರುವ ಕಾರಣ ಅವರು ಇಲ್ಲಿದ್ದಾರೆ. ಜಲ, ಅಗ್ನಿ, ವಾಯು, ಆಕಾಶ ಈ ಅಂಶಗಳು ಹೆಚ್ಚಾಗಿರುವವರು ಆಯಾ ಲೋಕಗಳಲ್ಲಿ ಜನಿಸುತ್ತಾರೆಂಬುದು ನಂಬುಗೆ.

ಅವಧೂತನಾದವನು ಸರ್ವಸಂಗ ಪರಿತ್ಯಾಗಿ, ಅವನಿಗೆ ಕೌಪೀನ, ಕಮಂಡಲಗಳು ಇರುವುದಿಲ್ಲ. ಅವನು ಪಂಚಭೂತಗಳಿಂದ ಪಾರಾದವನು, ತನ್ನನ್ನು ತಾನು ಮೀರಿದವನು. ಅವಧೂತನೆಂದರೆ ಅಜಗರ ವೃತ್ತಿ ಉಳ್ಳವನು ಎಂದು ಕರೆಯುತ್ತಾರೆ. ಅಜಗರ ಎಂದರೆ ಹೆಬ್ಬಾವು. ಅದು ಒಮ್ಮೆ ತಿಂದಮೇಲೆ ತಿಂಗಳಾನುಗಟ್ಟಲೆ ಮಿಸುಕಾಡದೆ ಬಿದ್ದುಕೊಂಡಿರುತ್ತದೆ. ಅದರ ಮೇಲೆ ಏನೇ ಬಿದ್ದರೂ ತನಗೇನೂ ಆಗಿಲ್ಲವೆನ್ನುವಂತೆ ಬಿದ್ದುಕೊಂಡಿರುತ್ತದೆ. ಅಂತಹ ಅಜಗರ ವೃತ್ತಿ ಉಳ್ಳವನೇ ಅವಧೂತ. ಜಗತ್ತೆಲ್ಲ ತಾನಾಗಿರುವುದರಿಂದ ಏನನ್ನು ತಿನ್ನಬೇಕು, ಏನನ್ನು ಕುಡಿಯಬೇಕು, ಏನನ್ನು ಧರಿಸಬೇಕು ಅದಾವುವೂ ಇಲ್ಲ. ವಿಸರ್ಗವೂ ಇಲ್ಲ. ಅವನು ಲೋಕಹಿತಕ್ಕಾಗಿಯೆ ಸದಾ ಇರುತ್ತಾನೆ. ದೇಹ ತಾನಾಗಿ ಕಳಚಿಹೋಗುವವರೆಗೂ ಬೀಳಿಸುವುದಿಲ್ಲ.

ಕಾಮದಿಂದಲೇ ಈ ಪ್ರಪಂಚವು ನಡೆಯುತ್ತಿರುವುದು. ಈ ಕಾಮವು ಇಂದ್ರಿಯಗಳನ್ನು ಆಶ್ರಯಿಸಿದೆ. ಮನಸ್ಸೂ ಒಂದು ಇಂದ್ರಿಯವೆ. ಸಂಪೂರ್ಣ ಮೋಹದಲ್ಲಿ ಮುಳುಗಿಸಿಬಿಡುವ ಶಕ್ತಿ ಕಾಮಕ್ಕಿದೆ. ಈ ಐಂದ್ರಿಯಜನ್ಯ ಕಾಮಕ್ಕೆ ಅಂಟಿಕೊಳ್ಳುವುದನ್ನು ಬೌದ್ಧರು ಅಜ್ಞಾನ ಎಂದು ಕರೆದಿದ್ದಾರೆ. ಅಂತಹ ಕಾಮದ ಕೋಟಲೆಯಿಂದ ತಪ್ಪಿಸಿಕೊಂಡವನನ್ನು ಅವಧೂತ ಎಂದು ಕರೆಯಲಾಗುತ್ತದೆ. ಸಂನ್ಯಾಸವೆಂದರೆ ಕರ್ಮನ್ಯಾಸ. ಸಂನ್ಯಾಸತ್ವವುಳ್ಳವನು ಸಂನ್ಯಾಸಿ. ಸಂನ್ಯಾಸ ಎಂದರೆ ಬಿಡುವುದು ಎಂದರ್ಥ. ಸಂನ್ಯಾಸವು ಬ್ರಹ್ಮಜ್ಞಾನಕ್ಕೆ ಕಾರಣವಾಗುತ್ತದೆ ಎನ್ನುತ್ತದೆ ಸನಾತನ ವಾಙ್ಮಯ. ಲಾಕ್ಷಣಿಕವಾಗಿ ಬ್ರಹ್ಮವೆಂದರೆ ಸಂನ್ಯಾಸವೆಂದೆ ಅರ್ಥ. ಇದು ಅಜಗರನ ಪೂರ್ವರೂಪ, ಆದ್ದರಿಂದ ಅವಧೂತನು ಈ ಹಂತವನ್ನು ದಾಟಿ ನಿಲ್ಲುತ್ತಾನೆ.

ಉಪನಿಷತ್ತಿನಲ್ಲಿ 'ಪಂಚಾತ್ಮ ಸಂಕ್ರಮಣ'ವೆಂಬ ಮಾತಿದೆ. ಅಂದರೆ ವಿಕಾರಗಳಿಂದ ಬಿಡಿಸಿಕೊಂಡು, ಪಂಚಭೂತಗಳನ್ನು ಗೆದ್ದು ವ್ಯೋಮಾತೀತನಾಗುವುದು. ಆಗ ಅವನು ನಿರಂಜನನಾಗುತ್ತಾನೆ ಅಂದರೆ ಯಾವುದಕ್ಕೂ ಅಂಟದವನು, ಏನನ್ನೂ ಅಂಟಿಸಿಕೊಳ್ಳದವನು. ತನ್ನನ್ನು ತಾನು ಅಶೂನ್ಯನೆಂದು ತಿಳಿದವನು. ಅವನಿಗೆ ಪುಟವಿಟ್ಟ ಚಿನ್ನದಂತೆ ಹೊಳೆಯುವ ಬಹಿಃಪ್ರಜ್ಞೆ ಇರುತ್ತದೆ. ಆದ್ದರಿಂದ ಅವನು ಆರ್ದ್ರಜ್ಯೋತಿ ಸ್ವರೂಪನಾಗಿರುತ್ತಾನೆ. 'ಆರ್ದ್ರಜ್ಯೋತಿ' ಎಂದರೆ ಇತರರನ್ನು ಸುಡದೇ ತಾನೇತಾನಾಗಿ ಬೆಳಗುವ ಜ್ಯೋತಿ. ಅವನನ್ನೇ ಅವಧೂತ ಎಂದು ಕರೆಯುವುದು. ವೈದಿಕ, ಜೈನ, ಬೌದ್ಧ ಧರ್ಮಗಳಲ್ಲಿ ಅವಧೂತ ಪರಂಪರೆ ನಡೆದುಕೊಂಡು ಬಂದಿದೆ. ಹೆಸರಿಸಲು ರಾಮಕೃಷ್ಣ ಪರಮಹಂಸರಿಂದ ಹಿಡಿದು ಬೆಳಗೆರೆ ಕೃಷ್ಣಶಾಸ್ತ್ರಿಗಳವರೆಗೆ ಅನೇಕರಿದ್ದಾರೆ. ಅವಧೂತ ಪರಂಪರೆ ಪ್ರಶ್ನಾತೀತವಲ್ಲದಿದ್ದರೂ ಭಾರತೀಯ ತತ್ವಶಾಸ್ತ್ರದಲ್ಲಿ ಒಂದು ವಿಶಿಷ್ಟ ಸ್ಥಾನ ಗಳಿಸಿಕೊಂಡಿದೆ.

■ **ಮೂಚಿ**

## ಮಾತೇ ಮುತ್ತು

★ ಅಪಾಯಗಳನ್ನು ಎದುರಿಸಲು ಧೈರ್ಯ ಇಲ್ಲದವನು ಜೀವನದಲ್ಲಿ ಏನನ್ನೂ ಸಾಧಿಸಲಾರ.

—ಬಾಕ್ಸರ್ ಮುಹಮ್ಮದ್ ಅಲಿ

★ ಜೀವನವೆಂದರೆ ಸೈಕಲ್ ಸವಾರಿಯಂತೆ. ಬೀಳದಂತಿರಲು ನೀವು ಸೈಕಲ್ ಸವಾರಿ ಮಾಡುತ್ತಲೇ ಇರಬೇಕು.

—ಆಲ್ಬರ್ಟ್ ಐನ್‌ಸ್ಟೀನ್

★ ಜೀವನ ಒಂದು ಪ್ರಯಾಣ. ರಸ್ತೆಯಲ್ಲಿ ಎಷ್ಟೇ ಕಲ್ಲು ಮುಳ್ಳುಗಳಿದ್ದರೂ ನಾವು ಪ್ರಯಾಣವನ್ನು ನಿಲ್ಲಿಸಲಾಗುವುದಿಲ್ಲ.

—ಒಲಿವರ್ ಗೋಲ್ಡ್‌ಸ್ಮಿಥ್

★ ಸಂತೋಷದ ಒಂದು ಬಾಗಿಲು ಮುಚ್ಚಿದರೆ ಇನ್ನೊಂದು ಬಾಗಿಲು ತೆರೆದುಕೊಳ್ಳುತ್ತದೆ. ಆದರೆ ಮುಚ್ಚಿದ ಬಾಗಿಲನ್ನೇ ನೋಡುತ್ತಾ ನಿಂತರೆ ತೆರೆದ ಬಾಗಿಲು ಕಾಣಿಸುವುದಿಲ್ಲ.

—ಹೆಲೆನ್ ಕೆಲ್ಲರ್

★ ಶಿಕ್ಷಣ ಎನ್ನುವುದು ಜೀವನಕ್ಕಾಗಿ ಸಿದ್ಧತೆ ಅಲ್ಲ. ಜೀವನವೇ ಶಿಕ್ಷಣ.

—ಜಾನ್ ಡೆವೀ

★ ಪ್ರಾರ್ಥನೆ ಎಂದರೆ ಯಾಚನೆಯಲ್ಲ, ಅದು ಆತ್ಮಸಂವಾದ. ಪ್ರಾರ್ಥನೆಯಲ್ಲಿ ಹೃದಯವಿಲ್ಲದ ಶಬ್ದಗಳನ್ನು ಹೊಂದುವುದಕ್ಕಿಂತ ಶಬ್ದಗಳಿಲ್ಲದ ಹೃದಯ ಹೊಂದುವುದು ಒಳ್ಳೆಯದು.

—ಮಹಾತ್ಮ ಗಾಂಧಿ

★ ನಮ್ಮ ಮನಸ್ಸುಗಳನ್ನು ನಮ್ಮ ಹೊರತು ಇನ್ನಾರೂ ಸ್ವತಂತ್ರಗೊಳಿಸಲು ಸಾಧ್ಯವಿಲ್ಲ.

—ಬಾಬ್ ಮಾರ್ಲೆ

★ ಮೊದಲು ನಡೆಯಲು ಹೊರಡಿ. ದಾರಿ ತನ್ನಿಂದತಾನೇ ಗೋಚರಿಸುತ್ತದೆ.

—ರೂಮಿ

★ ಬದುಕಲು ಎರಡೇ ದಾರಿ. ಒಂದೋ ಎಲ್ಲವೂ ಪವಾಡ ಎಂದುಕೊಂಡು ಬದುಕುವುದು. ಇಲ್ಲವೇ ಯಾವುದೂ ಪವಾಡವಲ್ಲ ಎಂಬಂತೆ ಬದುಕುವುದು.

—ಆಲ್ಬರ್ಟ್ ಐನ್‌ಸ್ಟೀನ್

★ ನಿನ್ನೆ ಎನ್ನುವುದು ಇತಿಹಾಸ, ನಾಳೆ ಎನ್ನುವುದು ನಿಗೂಢ. ಇವತ್ತು ಎನ್ನುವುದು ದೇವರು ಕೊಟ್ಟ ಕೊಡುಗೆ. ಅದನ್ನು ಚೆನ್ನಾಗಿ ಬಾಳಿ.

—ಬಿಲ್ ಕೀನ್

★ ಋಣಾತ್ಮಕ ಮನಸ್ಸು ಹೊಂದಿರುವವರು ಗುಣಾತ್ಮಕ ಜೀವನ ಹೊಂದಲು ಸಾಧ್ಯವಿಲ್ಲ.

—ಜೋಯ್ಸ್ ಮೆಯರ್

★ ಯಾವುದನ್ನು ಮಾಡಲು ಹೆದರಿಕೆ ಆಗುತ್ತದೋ ಅದನ್ನೇ ಯಾವತ್ತೂ ಮಾಡಿ.

—ರಾಲ್ಫ್ ಎಮರ್ಸನ್